ರೈತರನ್ನು ಯಾವದೋ ಕೂಪಕ್ಕೆ ಆಹ್ವಾನ ನೀಡುವಂತೆ ಕಾಣುತ್ತಿದ್ದವು. ಹಳ್ಳಿಯ ರೈತರಿಗೆ ಕೂಡಲು ಪ್ರತಿ ದಲ್ಲಾಳಿ ಅಂಗಡಿಯಲ್ಲೂ ಹತ್ತಿಯಿಂದ ಮಾಡಿದ ಮೆತ್ತನೆಯ ದಿಂಬು ಥಡಿ ತೆಕ್ಕೆಗಳು ಇರುತಿದ್ದವು. ಅದೊಂದು ಸಣ್ಣ ಪಾರ್ಟೀ ಆಫೀಸಿನಂತೆಯೂ ತೋರುತ್ತಿತ್ತು. ಅದರ ಮೇಲೆ ಕೂಡುವ ಮಂಜೂರ ಪಾಟು ಬಟ್ಟೆಯ, ಮಾರ್ಗಿ ಅಂಗಿಯ ರೈತರು ಕುಂಡೆ ಊರಿಯೂ ಊರದಂತೆ ಕೂರುತ್ತಿದ್ದರು. ಈ ಕುರಿತು ರೈತರು ಕಟ್ಟೆ ಮೇಲೆ ಕೂತು ಇಳಿಸಂಜೆ ಆಗುವವರೆಗೂ ಹಸಿವು ಮರೆತು ಚರ್ಚಿಸುತ್ತಿದ್ದರು. ಅವರ ಹಸಿವುಗಳು ಬೇರೆಯೇ ಇದ್ದವು. ಧಾರಣೆ ಸಿಗದೇ ಇದ್ದರೆ ರೆಫ್ಯೂಜ್ ಮಾಡಬೇಕು. ನಾಳೆ ಧಾರಣೆ ಸಿಗುವುದೆಂಬ ಗ್ಯಾರಂಟಿ ಇರಲಿಲ್ಲ. ರೆಫ್ಯೂಜ್ ಮಾಡಿದ ಚೀಲಗಳಿಗೆ ಕರ ಬಾಡಿಗೆ ನೆಲ ಬಾಡಿಗೆ ಹಮಾಲರ ಮಜೂರಿ ನೀಡಬೇಕಾಗಿತ್ತು. ಹೀಗೆ ರೆಫ್ಯೂಜ್ ಮಾಡುತ್ತ ದಿನಗಳೆದು ಆದ ಖರ್ಚುಗಳಿಗೂ ಹುಟ್ಟಿದ ದರಪಟ್ಟಿಗೂ ಸಮನಾಗಿ ಬರಿಗೈ ಬೀಸಿಕೊಂಡು ಬಂದವರ ಅನೇಕ ಉದಾಹರಣೆಗಳಿದ್ದವು. ಒಂದು ರೀತಿಯಲ್ಲಿ ವಖಾರ ತನ್ನ ಮುಳ್ಳು ನಾಲಿಗೆ ಚಾಚಿ ಮೈ ನೆಕ್ಕುತ್ತಿತ್ತು.

ನಾಳೆ ಎಂಬುದು ಯಾವತ್ತಿಗೂ ಬೆರಗು. ನಾಳೆ ಪುಣೆ–ಬಾಂಬೆಯ ಟೆಂಡರ್‌ದಾರರು ಬರುತ್ತಾರೆ. ನಾಳೆ ಒಳ್ಳೆಯ ಧಾರಣೆ ಬರಲಿದೆ... ನಾಳೆ ಒಳ್ಳೆಯ ದಿನಗಳು ಬರಲಿವೆ... ನಾಳೆ ಮಳೆ ಬರಲಿದೆ... ಮಣ್ಣು ಕಣ್ಣು ಬಿಟ್ಟು ಬೀಜ ಮೊಗರಳಿಸಲಿದೆ... ನಾಳೆ ಅಪ್ಪ ಬರುತ್ತಾನೆ... ವಖಾರದ ಕೊಬ್ಬರಿ ವಡಾ ಜಿಲೇಬಿ ತರುತ್ತಾನೆ... ನಾಳೆಯ ಹಂಗಿನಲ್ಲಿ ಇಂದು ಉಸಿರಾಡುತ್ತಲೇ ಇರುತ್ತದೆ.

***

ವಖಾರದ ಮುಂದಿನ ರಸ್ತೆಗೆ ಹೊಂದಿಕೊಂಡಂತೆ ಕೊಟ್ಟೂರೇಶ್ವರ ಲಿಂಗಾಯತರ ಖಾನಾವಳಿ, ವೀರಭದ್ರೇಶ್ವರ ರೊಟ್ಟಿ ಖಾನಾವಳಿ, ಬಸವೇಶ್ವರ ಖಾನಾವಳಿ, ಹೀಗೆ ಖಾನಾವಳಿಗಳ ಹೊಳೆಯೇ ರಸ್ತೆಯ ಆ ಬದಿಯಿಂದ ಈ ಬದಿಯವರೆಗೂ ಚಾಚಿಕೊಂಡಿತ್ತು. ಅದೇ ರೊಟ್ಟಿ, ಹೆಸರು ಅವರಿಕಾಳಿನ ಪಲ್ಲೆ, ಕೆಂಪು ಹಿಂಡಿ, ನೀರು ಮೊಸರು, ಬೇಳೆ ಇಲ್ಲದ ಹುಣಸೆ ಹುಳಿಸಾರು, ಸೋಡಾಪುಡಿ ಹಾಕಿ ಉಬ್ಬಿಸಿದ ಅನ್ನ – ಇದು ನಿತ್ಯ ರೈತರು ಉಣ್ಣುವಂತದ್ದೇ. ಅದಕ್ಕಿಷ್ಟು ತೆರಬೇಕು. ವಖಾರಕ್ಕೆ ಅಂಡಿಗೆ ಇಳಿಸಿದ ಕೂಡಲೇ ನೂರು ರೂಪಾಯಿ ಖರ್ಚು ಹಾಕಿ ಮಾಲೀಕರಿಂದ ತೆಗೆದುಕೊಳ್ಳುವ ರೈತರೇ ಹೆಚ್ಚು. ಅದನ್ನು ಅಂಗಡಿಯವ ಪುಕ್ಕಟೆ ಕೊಟ್ಟನೇನೋ ಎಂಬಂತೆ ಜೇಬಿಗೆ ಇಳಿಸಿಕೊಳ್ಳುತ್ತಿದ್ದರು. ಖಾನಾವಳಿಗಳ ಸಾಲುಗಳ ಹಿಂಬದಿಗೆ ಮಿರ್ಚಿ ಮಂಡಕ್ಕಿ ಅಂಗಡಿಗಳ ಸಾಲು ಇತ್ತು.

ಸುತ್ತ ಬಿದುರಿನ ತಡಿ ಕಟ್ಟಿ ನಾಲ್ಕು ಕಟ್ಟಿಗೆಯ ಬಾಕು ಹಾಕಿ ನಡುವೆ ಒಲೆ ಹೂಡಿ ಅದರ ಮೇಲೆ ಕುದಿಯುತ್ತಿರುವ ಎಣ್ಣೆಯ ಬಾಣಲಿ, ಹೊರಗಡೆ ಒಂದು ಪ್ಲಾಸ್ಟಿಕ್ ಡ್ರಮ್, ಅದರಲ್ಲಿ ತೇಲುವ ಕಮಲದಂತಹ ಐದಾರು ನಾನಾ ಬಣ್ಣದ ಪ್ಲಾಸ್ಟಿಕ್ ಚಂಬುಗಳು, ತೊಳೆಯಲು ಕುಡಿಯಲು ಅವೇ... ಇದು ಹೋಟೆಲ್.

ದಪ್ಪ ದಪ್ಪ ಡಬ್ಬು ಮೆಣಸಿನಕಾಯಿಯ ತುದಿ ಮುರಿದು ಹಸಿ ಹಿಟ್ಟಿನಲ್ಲಿ ಅದ್ದಿ ಬಾಣಲಿಗೆ ಬಿಟ್ಟರೆ, ಅವು ಎಂದು ಬೆಂದು ಹೊರಬಂದಾವೋ ಎಂದು ಜೊಲ್ಲು ಒಳಗೆಳೆದುಕೊಳ್ಳುತ್ತಾ ಕೂತಿರುವವರ ಸಾಲು. ಅವರ ಅವಸರಕ್ಕೋ... ಎಣ್ಣೆ ಹೆಚ್ಚು ಕುಡಿಯುತ್ತವೆ ಅಂತಲೋ... ಅಂಗಡಿಯಾತ ಹಸಿ ಹಸಿ ಮಿರ್ಚಿಗಳನ್ನೇ ಎತ್ತಿಕೊಡುತ್ತಿದ್ದ. ನ್ಯೂಸ್ ಪೇಪರ್‌ನ ತುಂಡು ಹಾಳೆಗಳಲ್ಲಿ ಒಣ ಮಂಡಕ್ಕಿಯೊಂದಿಗೆ ಮಿರ್ಚಿ ಎಡೆಯಾಗುತ್ತಿದ್ದವು.

ಅದನ್ನು ಸವಿಯುವ ಸಂಭ್ರಮ ಉತ್ತಮ ಧಾರಣೆ ಸಿಗಲಿಲ್ಲವೆಂಬ ಸಂಕಟ, ಮಾಲು ನಾಳೆಗೆ ರೆಫ್ಯೂಜ್ ಆಯಿತೆಂಬ ಬೇಸರ ಎಲ್ಲವನ್ನು ಮರೆಯಿಸಿ ಹಾಕುತ್ತಿತ್ತು. ಇದು ಆ ಕ್ಷಣದ ಸುಖ. ಸುಡು ಸುಡು ಮಿರ್ಚಿಯನ್ನು ಬಾಯಲ್ಲಿಟ್ಟುಕೊಂಡು ತುಟಿ, ನಾಲಿಗೆ ಸುಟ್ಟುಕೊಂಡವರೆಷ್ಟೋ... ಸುಟ್ಟಿದ್ದು ನಾಲಿಗೆಯೋ ಬದುಕೋ ಎಂಬುದನ್ನು ಅರ್ಥ ಮಾಡಿಕೊಳ್ಳದ ಅಮಾಯಕತೆಯೊಂದು ವಖಾರವನ್ನು ಮುನ್ನಡೆಸುತ್ತಲಿತ್ತು.

ಊರಿಗೆ ಬಂದ ರೈತರು, 'ಎಂಥಾ ಮಿರ್ಚಿಲೇ ಅವು, ಎರಡು ತಿಂದ್ರ ಹೊಟ್ಟಿ ತುಂಬಿ ಹೋಕ್ಕತಿ, ಊಟಾನ ಬ್ಯಾಡ ಹೋಗ್ಗ' ಎಂದು ಮಾತನಾಡುತ್ತಿದ್ದರೆ, ಕೇಳಿದ ಇತರರಿಗೆ ತಾವೂ ಒಮ್ಮೆ ಬ್ಯಾಡಗಿ ವಖಾರಕ್ಕೆ